## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

ಎಸ್.ಸಿ. ಸಂಖ್ಯೆ 246/2023

| | | |
|---|---|---|
| ಸಾಕ್ಷಿದಾರರ ಹೆಸರು | : ಇರ್ಫಾನ್ | ಪಿಡಬ್ಲ್ಯೂ ಃ 9 |
| ತಂದೆಯ / ಗಂಡನ ಹೆಸರು | : ಜಿಯಾವುದ್ದೀನ್ | ಸಿಡಬ್ಲ್ಯೂ ಃ 18 |
| ವಯಸ್ಸು | : 38 ವರ್ಷ | |
| ಉದ್ಯೋಗ | : ಆಟೋ ಚಾಲಕ | |
| ವಾಸಸ್ಥಳ | : ಅಮೃತ ಬಡಾವಣೆ | |

**ಸಾಕ್ಷಿಯನ್ನು ಈ ದಿನ ದಿಃ15.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ

1. ನಾನು ಮೇಲೆ ಹೇಳಿದ ವಿಳಾಸದಲ್ಲಿ ಹಲವು ವರ್ಷಗಳಿಂದ ವಾಸವಿರುತ್ತೇನೆ.

2. ನನ್ನ ಬಳಿ ಒಂದು ಆಟೋ ಇದ್ದು, ಅದರ ನಂಬರ್ **KA** 05 **B** 5019 ಆಗಿರುತ್ತದೆ. ಸದರಿ ಆಟೋವನ್ನು ನಾನು ಜಯಮ್ಮರವರಿಂದ ಖರೀದಿ ಮಾಡಿರುತ್ತೇನೆ. ಸದರಿ ಆಟೋವನ್ನು ನಾನು ಸುಮಾರು 1 ವರ್ಷದವರೆಗೆ ಓಡಿಸಿರುತ್ತೇನೆ. ನಂತರ ನನಗೆ ಆರೋಗ್ಯ ಸರಿ ಇಲ್ಲದ ಕಾರಣ ಸದರಿ ಆಟೋವನ್ನು ಸಲೀಂ ರವರಿಗೆ ಮಾರಾಟ ಮಾಡಿರುತ್ತೇನೆ. ಸದರಿ ಸಲೀಂ ರವರಿಗೆ ನಾನು ವಾಹವನ್ನು ತಮ್ಮ ಹೆಸರಿಗೆ ಮಾಡಿಕೊಳ್ಳುವಂತೆ, ಕೇಳಿಕೊಂಡು ಫಾರಂ ಗೂ ಸಹ ಸಹಿ ಮಾಡಿಕೊಟ್ಟಿರುತ್ತೇನೆ. ಆದರೆ ಅವರು, ಸದರಿ ವಾಹನವನ್ನು ನೊಂದಾಯಿಸಿಕೊಂಡಿರುವುದಿಲ್ಲ.

3. ಎರಡು ವರ್ಷಗಳ ನಂತರ ಮಂಡಿ ಪೊಲೀಸ್ ಠಾಣೆಯ ಪೊಲೀಸರು ನನ್ನನ್ನು ಕರೆಸಿದರು. ಪೊಲೀಸರು ನನ್ನ ಆಟೋವನ್ನು ಒಂದು ಕೊಲೆ ಪ್ರಯತ್ನದ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುತ್ತದೆ ಎಂದು ನನಗೆ ತಿಳಿಸಿದರು. ಸದರಿ ಆಟೋವನ್ನು ಸಲೀಂ ರವರು ಯಾರಿಗೆ ಮಾರಾಟ ಮಾಡಿರುತ್ತಾರೆ ಎಂದು ಈಗ ನನಗೆ ಸರಿಯಾಗಿ ನೆನಪಾಗುತ್ತಿಲ್ಲ. ಠಾಣೆಯಲ್ಲಿ ನನ್ನ ಬಳಿ ಸಹಿ ಪಡೆದುಕೊಂಡು ಕಳುಹಿಸಿರುತ್ತಾರೆ.

4. ನಾನು ಪೊಲೀಸ್ ಠಾಣೆಗೆ ಹೋದಾಗ ನನ್ನ ಆಟೋ ಠಾಣೆಯಲ್ಲಿ ಇತ್ತು. ನನ್ನ ಆಟೋದ ಪೋಟೋವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಗೆ ಪೊಟೋವನ್ನು ತೋರಿಸಿ ಆಟೋವನ್ನು ಗುರುತಿಸಲು ಕೇಳಿದಾಗ, ಸಾಕ್ಷಿಯೂ ಪೋಟೋದಲ್ಲಿ ಇರುವ ಆಟೋವನ್ನು ನೋಡಿ ಗುರುತಿಸಿದ್ದು, ಸದರಿ ಪೋಟೋವನ್ನು ನಿಪಿ.14 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

<u>ಪಾಟೀ ಸವಾಲು : ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>

5. ನಾನು ಪೊಲೀಸ್ ಠಾಣೆಗೆ ಹೋದಾಗ ನನ್ನ ಆಟೋವನ್ನು ಸಲೀಂ, ರೆಹಮತ್ ಉಲ್ಲಾ ಎನ್ನುವವರಿಗೆ ಮಾರಾಟ ಮಾಡಲಾಗಿರುತ್ತದೆ ಎಂದು ಪೊಲೀಸರು ನನಗೆ ತಿಳಿಸಿದರು. ಸದರಿ ನನ್ನ ಆಟೋವನ್ನು ಸುರೇಶ್ ಅಲಿಯಾಸ್ ಸೂರಿ ಎಂದು, ಕೊಲೆ ಮಾಡಲು ಪ್ರಯತ್ನಿಸಲು ಉಪಯೋಗಿಸಿದರ ಬಗ್ಗೆ ಪೊಲೀಸ್ ಠಾಣೆಯಲ್ಲಿ ತಿಳಿಸಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

6. ನನಗೆ ಆಟೋ ಚಲಾಯಿಸಲು ಲೈಸೆನ್ಸ್ ಇರುತ್ತದೆ ಎಂದರೆ ಸರಿ. ಸದರಿ ಲೈಸೆನ್ಸನ್ನು ನಾನು ಪೊಲೀಸರಿಗೆ ನೀಡಿರುವುದಿಲ್ಲ. ಸದರಿ ಆಟೋವನ್ನು ಜಯಮ್ಮ ರವರಿಂದ ಖರೀದಿ ಮಾಡಿಕೊಂಡಿರುತ್ತೇನೆ ಎಂದು ಹೇಳಿದ್ದು, ಅವರಿಂದ ಖರೀದಿ ಮಾಡಿಕೊಂಡ ನಂತರ ನಿಮ್ಮ ಹೆಸರಿಗೆ ನೊಂದಾಯಿಸಿಕೊಂಡಿರುತ್ತೀರಿಯೇ ಎಂದರೆ ಸಾಕ್ಷಿಯೂ ನನಗೆ ಆರೋಗ್ಯ ಸರಿ ಇಲ್ಲದ ಕಾರಣ ನೊಂದಾಯಿಸಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಆಟೋ ಚಲಾಯಿಸಲು ಬ್ಯಾಡ್ಜ್‌ನ್ನು ಕೂಡ ಪಡೆದುಕೊಂಡಿರುವುದಿಲ್ಲ . ನಾನು ಜಯಮ್ಮ ರವರಿಂದ ಆಟೋವನ್ನು ಖರೀದಿಸಿರುವುದಿಲ್ಲ, ಅದನ್ನು ನಾನು ಚಲಾಯಿಸುತ್ತಿದ್ದೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಸದರಿ ಆಟೋವನ್ನು ಸಲಿಂ ಅವರಿಗೆ ಮಾರಾಟ ಮಾಡಿದೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ.

7. ನಾನು ಜಯಮ್ಮ ರವರಿಂದ ಯಾವ ವರ್ಷ ಆಟೋವನ್ನು ಖರೀದಿಸಿದೆ ಎಂದು ಹೇಳಲು ಬರುವುದಿಲ್ಲ. ಸಲೀಂ ರವರಿಗೆ ಆಟೋವನ್ನು ಯಾವ ವರ್ಷ ಮಾರಾಟ ಮಾಡಿರುತ್ತೇನೆ ಎಂದು ನನಗೆ ಹೇಳಲು ಬರುವುದಿಲ್ಲ. ನಾನು ಹಾಗಾಗ ಪೊಲೀಸ್ ಠಾಣೆಗೆ ಹೋಗುತ್ತಿದ್ದೆ ಎಂದರೆ ಸರಿಯಲ್ಲ. ನಾನು ಆಟೋ ಓಡಿಸುತ್ತಿದ್ದೆ ಎಂದು ಹೇಳುವ ಕಾಲದಲ್ಲಿ ಠಾಣೆಗೆ ಹೋಗಿರುತ್ತೀರಿಯೇ ಎಂದರೆ ಸಾಕ್ಷಿಯೂ ಇಲ್ಲ ಎಂದು ನುಡಿಯುತ್ತಾರೆ. ನನಗೆ ಪೊಲೀಸರು ಈ ರೀತಿ ಸಾಕ್ಷಿ ಹೇಳುವಂತೆ ಹೇಳಿದ ಮೇರೆಗೆ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಾಹನವನ್ನು ಸಲಿಂ, ರೆಹಮತ್ ಉಲ್ಲಾ ರವರಿಗೆ ಮಾರಾಟ ಮಾಡಿರುತ್ತಾನೆ ಮತ್ತು

ಅದನ್ನು ಕೃತ್ಯಕ್ಕೆ ಉಪಯೋಗಿಸಲಾಗಿರುತ್ತದೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸಾಕ್ಷಿಯೂ ಪೊಲೀಸರ ನನಗೆ ಹೇಳಿದ್ದರು ಎಂದು ನುಡಿಯುತ್ತಾರೆ. ಪೊಲೀಸರು ಹೇಳಿಕೊಟ್ಟಂತೆ ನಾನು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**